ಪದ್ಧತಿಯಂತೆ ಏಕೆ ಬರಬಾರದು? ನೀವಂತೂ ಮಾಡುವುದಿಲ್ಲ. ನಿಮಗೆ ಕೆಳೆ ಬಗ್ಗೆ ಗಮನ ಇಲ್ಲ. ಈಚಲು ಮರದ ಬಗ್ಗೆ ಗಮನ ಇದೆ. ಮತ್ತೆ ವಾಪಸ್ ನಮಗೆ ಕೆರೆ ಕೊಡಿ ನಾವು ಸರಿ ಮಾಡಿಕೊಳ್ಳುತ್ತೇವೆ.

ಶ್ರೀ ಕೆ.ಹೆಚ್. ರಂಗನಾಥ್ : ನಂಜುಂಡ ಸ್ವಾಮಿಯವರೆ, ಈಚಲು ಮರ ಎಲ್ಲಿದೆ, ಈಚಲು ಮರ ಇಲ್ಲ.

ಡಾ॥ ಆರ್. ಬಿ. ಚೌಧರಿ : ನಾನು ಖುದ್ದಾಗಿ ಹೋಗಿ ಪರಿಶೀಲಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಅವರು ಉತ್ತರ ಹೇಳಿದ್ದಾರೆ. ಕೌಜಲಗಿಯವರೆ, ಕುಳಿತುಕೊಳ್ಳಿ. ಅವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ. ನೆಕ್ಸ್ಟ್ ಕ್ವೊಶ್ಚನ್.

(ಗೊಂದಲ)

ಅಧ್ಯಕ್ಷರು : ಈ ರೀತಿ ಮಾತನಾಡಿದರೆ ಏನು ಆಗುತ್ತದೆ? ಕೌಜಲಗಿಯವರೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಸದಸ್ಯರಾದಂತಹ ಸುಭಾಷ್‌ಜೋಷಿ ಅವರದು ಬಹಳ ಸಿಂಪಲ್ ಪ್ರಶ್ನೆ ಇದೆ. ಮಾನ್ಯ ಸಚಿವರು ಈ ಕೆಲಸ ಮೂರು ತಿಂಗಳೊಳಗೆ ಶುರು ಮಾಡುತ್ತೇವೆ ಎಂದು ಹೇಳಿದರು. ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದು ಹೇಗೆ ಉತ್ತರ ಕೊಡುವುದಕ್ಕೆ ಆಗುತ್ತದೆ? ಪರಿಶೀಲನೆ ಅಲ್ಲ ಕೆಲಸ ಶುರು ಆಗಿದ್ದರೆ ಶುರು ಆಗಿದೆ ಎಂದು ಹೇಳಲಿ. ಶುರು ಮಾಡುವುದಕ್ಕೆ ಆಗಲಿಲ್ಲ ಎಂದರೆ ಇಂತಹ ತೊಂದರೆಯಿಂದ ಶುರು ಮಾಡುವುದಕ್ಕೆ ಆಗಿಲ್ಲ ಎಂದು ಹೇಳಲಿ. ಇಷ್ಟು ದಿವಸದೊಳಗೆ ಮಾಡುತ್ತೇವೆ ಎಂದು ಹೇಳಲಿ. ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಹೇಗೆ? ಇಂತಹ ಅಶ್ಯೂರೆನ್ಸ್ ಕೊಟ್ಟಿಲ್ಲ ಎಂದಾದರೂ ಹೇಳಲಿ.

ಡಾ॥ ಆರ್. ಬಿ. ಚೌಧರಿ : ಅಲ್ಲಿಯ ಪರಿಸ್ಥಿತಿ ಏನು ಇದೆ ಎಂದು ಖುದ್ದಾಗಿ ಹೋಗಿ ನೋಡಿ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಿದ್ದೇನೆ. ಹಣ ಕೊಟ್ಟಿರುವುದು ನಾಲಾ ಬಂಡಿಂಗ್ ಎಂದು ಇನ್‌ಫರ್ಮೇಶನ್ ಬಂದಿದೆ. ಅದರ ಸಲುವಾಗಿ ನಾನು ಖುದ್ದಾಗಿ ಹೋಗಿ ಪರಿಶೀಲನೆ ಮಾಡಿ ತೀವ್ರವಾಗಿ ವರ್ಕ್ ಸ್ಟಾರ್ಟ್ ಆಗುವ ಹಾಗೆ ಮಾಡುತ್ತೇನೆ.

ಸಕಲೇಶಪುರ ಜೆ.ಎಂ.ಎಫ್.ಸಿ.ಗೆ. ಸ್ವಂತ ಕಟ್ಟಡ ನಿರ್ಮಾಣ

170 - ಶ್ರೀ ಬಿ. ಆರ್. ಗುರುದೇವ್, (ಸಕಲೇಶಪುರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಜೆ.ಎಂ.ಎಫ್.ಸಿ.ಗೆ. ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರದವರು ಸ್ವಂತ ಕಟ್ಟಡ ನಿರ್ಮಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಇ) ಸಕಲೇಶಪುರದಲ್ಲಿ ಆರ್.ಎಂ.ಸಿ.ಯ ಖಾಲಿ ಜಾಗವಿದ್ದು ಅದನ್ನು ಜೆ.ಎಂ.ಸಿ.ಗೆ ಸ್ವಾಧೀನಪಡಿಸಿಕೊಂಡು ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು

ಆ) ನ್ಯಾಯಾಯಲಯದ ಕಟ್ಟಡ ನಿರ್ಮಿಸಲು ಸಕಲೇಶಪುರದಲ್ಲಿ ಸರ್ವೆ ನಂ. 164 ರಲ್ಲಿ ಎರಡು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸಕಲೇಶಪುರದಲ್ಲಿ ಆರ್. ಎಂ. ಸಿ. ನಿವೇಶನವನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಯಾವುದೇ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಶ್ರೀ ಬಿ.ಆರ್. ಗುರುದೇವ್ : ಮಾನ್ಯ ಅಧ್ಯಕ್ಷರೇ, ನಾನು ಕೇಳಿದಂತಹ ಪ್ರಶ್ನೆಗೆ ಉತ್ತರದಲ್ಲಿ ಕಟ್ಟಡ ಇಲ್ಲ ಎಂದು ತಿಳಿದು ಬಂದಿದೆ ಎಂದು ಹೇಳಿದ್ದಾರೆ. ಸಕಲೇಶಪುರದಲ್ಲಿ ಸರ್ವೆ ನಂಬರ್ 164 ರಲ್ಲಿ ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಸರ್ವೆ ನಂಬರ್ 164ರಲ್ಲಿ ಈಗಾಗಲೇ ತಂದೆ ಮಕ್ಕಳ ಹಿಸ್ಸೆಯಲ್ಲಿ ಕೆಲವೊಂದು ಭೂಮಿಮಾರಾಟ ಆಗಿ ಹೋಗಿದೆ. ಆದ್ದರಿಂದ ನಾನು ಕೊನೆಯ ಪ್ರಶ್ನೆಯನ್ನು ಕೇಳುತ್ತೇನೆ. ಜೆ.ಎಂ.ಎಫ್.ಸಿ.ಗೆ. 10 ಎಕರೆಯಷ್ಟು ಖಾಲಿ ಜಾಗ ಇದೆ. ತಾವು ಜಿಲ್ಲಾ ಮಂತ್ರಿಗಳು, ತಮಗೆ ಗೊತ್ತಿದೆ. ಆ ಜಾಗವನ್ನು ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬಹುದು. ಮತ್ತು ತಮ್ಮ ಇಲಾಖೆಗೆ ಬೇಕಾದಂತಹ ಒಂದು ಕಟ್ಟಡವನ್ನು ನಿರ್ಮಾಣ ಮಾಡುವುದಕ್ಕೆ ಸುಲಭ ಆಗುತ್ತದೆ. ಇದರ ಬಗ್ಗೆ ತಾವು ಆಶ್ವಾಸನೆ ಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಸಕಲೇಶ್ವರಪುರಕ್ಕೆ ನಮ್ಮ ಶಾಸಕರ ಜೊತೆಯಲ್ಲಿ ಹೋಗಿ ಸ್ಥಳವನ್ನು ನೋಡಿ ಅಲ್ಲಿಯೇ ತೀರ್ಮಾನ ಕೊಟ್ಟು ಬರುತ್ತೇನೆ.

ಶ್ರೀ ಬಿ.ಆರ್. ಗುರುದೇವ : ತುಂಬಾ ಸಂತೋಷ.

ಬೇಡ್ತಿ ಜಲವಿದ್ಯುತ್ ಯೋಜನೆ ಮತ್ತು ಶರಾವತಿ ಟೇಲ್ ರೇಸ್ ಯೋಜನೆ

480- ಶ್ರೀ ಆರ್. ಎನ್. ನಾಯ್ಕ್ (ಭಟ್ಕಳ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಡ್ತಿ ಜಲವಿದ್ಯುತ್ ಯೋಜನೆ ಮತ್ತು ಶರಾವತಿ ಟೇಲ್‌ರೇಸ್ ಯೋಜನೆಯನ್ನು ಕಾರ್ಯಗತಗೊಳಿಸಲು ತೊಂದರೆಏನಾದರೂ ಇದೆಯೇ?

ಆ) ಹಾಗಿದ್ದಲ್ಲಿ ಅವು ಯಾವುವು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) ಹೌದು

ಆ) (1) ಬೇಡ್ತಿ ಯೋಜನೆ :

1) ದಿ: 3-2-92ರ ರಾಜ್ಯ ಸರ್ಕಾರದ ಆದೇಶದ ಮೇರೆಗೆ ಪರಿಷ್ಕೃತ ಜಲಾಶಯದ ಮಟ್ಟ 1540 ಅಡಿಗಳಿಗೆ ನಿಗದಿ ಪಡಿಸಿದ ಬೇಡ್ತಿ ಯೋಜನೆಯ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಯಿತು. ಆದರೂ ಅವುಗಳನ್ನು ಈ ಕೆಳಗಿನ ಕಾರಣಗಳಿಂದ ಮುಂದೂಡಲಾಯಿತು.

ಕೇಂದ್ರ ಸರ್ಕಾರದ ಪರಿಸರ ಇಲಾಖೆಯು ಪರಿಷ್ಕೃತ ಬೇಡ್ತಿ ಯೋಜನೆಗೆ ಪರಿಸರಾತ್ಮಕ ಅನುಮೋದನೆಯನ್ನು ಪಡೆದುಕೊಳ್ಳುವವರೆಗೆ ಸದರೀ ಕಾಮಗಾರಿಗಳನ್ನು ನಿಲ್ಲಿಸಬೇಕು ಎಂದು ದಿ: 16-10-92 ರ ತನ್ನ ಪತ್ರದಲ್ಲಿ ನಿಗಮಕ್ಕೆ ಆದೇಶ ನೀಡಿರುತ್ತದೆ.

ಬ) ಬೇಡ್ತಿ ಮತ್ತು ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಎಂಬ ಸಂಘಟನೆ ಬೇಡ್ತಿ ಯೋಜನೆಯ ಅನುಷ್ಠಾನದ ವಿರುದ್ಧ ಸಾರ್ವಜನಿಕ ಹಿತಾಸಕ್ತಿಯ ದಾವೆಯನ್ನು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ದಾಖಲು ಮಾಡಿರುವುದರಿಂದ ಬೇಡ್ತಿ ಯೋಜನೆಯನ್ನು